ಬಿಟ್ಬಾಗ ಮಾತ್ರ ನೀವು ಹೆಚ್ಚು ಕ್ರಿಯೇಟಿವ್ ಆಗ್ತೀರಿ ಅನ್ನೋದು ನನ್ನ ಘನವಾದ ಭಾವನೆ. ಇದನ್ನು ಬಿಡುವುದರಿಂದ ನೀವು ಕೆಲವು ಪೂರ್ವಗ್ರಹಗಳಿಂದ ಬಿಡುಗಡೆ ಹೊಂದುವಿರಿ. ನೀವು ಕುವೆಂಪು, ಬೇಂದ್ರೆ ಅವರ ಕಾವ್ಯವನ್ನು ಪ್ರೀತಿಸಲಿಕ್ಕೆ ಸಾಧ್ಯವಾಗ್ತದೆ. ಅವರನ್ನು ಎದುರಾಳಿಗಳಂತೆ ಇಡದೆ ಅವರ ಕಾವ್ಯದಲ್ಲಿ ಪಯಣ ಮಾಡಲಿಕ್ಕೆ ಸಾಧ್ಯವಾಗ್ತದೆ. ದಲಿತ ಕಾವ್ಯ ಅನ್ನೋ ಕಾರಣಕ್ಕೇನೆ ಅದರ ಮೋಹಕ್ಕೊಳಗಾಗುವ ಅಥವಾ ಅದು ದಲಿತ ಕಾವ್ಯ ಅನ್ನೋ ಕಾರಣಕ್ಕೆ ಅನಗತ್ಯ ಸಿನಿಕತನ ತೋರುವ, ದೂರ ಇಡುವ ಎರಡೂ ಮಾದರಿಗಳಿಂದ ಹೊರಬರ್ತೀರಿ. ಇದೆಲ್ಲ ಯಾಕೆ ಬರ್ತದೆ ಅಂದರೆ, ಚರಿತ್ರೆಯ ಭಾಗವಾಗಿ ನೋಡುವುದರಿಂದ. ಇಂಥ ಭಾರಗಳಿಂದ ನಮ್ಮ ಶಿಕ್ಷಣ ವ್ಯವಸ್ಥೆಯನ್ನು, ನಮ್ಮ ವಿಮರ್ಶಕರನ್ನು ಹೇಗೆ ಹೊರತರುವುದು? ಇದು ನನ್ನನ್ನು ಬಹಳ ದಿನಗಳಿಂದ ಕಾಡುತ್ತಿರುವ ಪ್ರಶ್ನೆ. ನೋಡಿ, ಸಿದ್ಧಲಿಂಗಯ್ಯ ಅವರ ಕಾವ್ಯವನ್ನು ಓದುತ್ತಿರುವವರು ಸಾಮಾನ್ಯವಾಗಿ ಅವರ ಕಾವ್ಯದ ಭಾಷೆ ಕುರಿತು ಕೆಲ ಮಾತು ಹೇಳ್ತಿರ್ತಾರೆ. ಅವರು ಕಾವ್ಯದ ಭಾಷೆಯನ್ನು ಅಷ್ಟು ಗಂಭೀರವಾಗಿ ತೆಗೆದುಕೊಂಡಿಲ್ಲ ಅಂತ. ಅದನ್ನು ವಿಮರ್ಶೆಯಲ್ಲಿ ಬರೆದೂ ಇದ್ದೇವೆ. ಅವರ ಕಾವ್ಯದಲ್ಲಿ ಬರೀ ಘೋಷಣೆ ಇದೆ, ರೋಷ ಇದೆ, ಮುಂದೆ ಈ ರೋಷ ಪ್ರೀತಿಗೆ ತಿರುಗಿಬಿಟ್ಟಿದೆ ಅಂತ. ರೋಷ ಮಾಡಿದ್ರು ಇಲ್ಲವೆ ಪ್ರೀತಿ ಮಾಡಿದ್ರು. ಇವೆರಡರ ನಡುವೆ ಇಟ್ಟು ಸಿದ್ಧಲಿಂಗಯ್ಯನವರ ಕಾವ್ಯವನ್ನು ನೋಡಿದ್ದೀವಿ. ಅವರ ಕಾವ್ಯವನ್ನು ಓದಲಿಕ್ಕೆ ಇಷ್ಟೇ ಸಾಕಾಗಲ್ಲ ಅನ್ನೋದು ನನ್ನ ಭಾವನೆ. ಅವರ ಕಾವ್ಯದ ಭಾಷೆಯ ಮೂಲಕ ಒಂದು ಗಂಭೀರವಾದ ಪಯಣ ಮಾಡುವ ಅಗತ್ಯವಿದೆ.

◆ ಯಾವಾಗಲೂ ಒಳ್ಳೆಯ ಕಾವ್ಯಗಳಲ್ಲಿ ಓದುಗರನ್ನು ಸೃಜನಶೀಲವಾಗಿ ಉದ್ದೀಪಿಸುವ ಒಂದು ಗುಣ ಇರ್ತದೆ. ಅದನ್ನು ಪಡೆದುಕೊಳ್ಳುವ ಓದು ಮಾಡಬೇಕು. ಇದರಿಂದ ಓದುಗರಿಗೂ ಲಾಭ, ಬರಹಗಾರರಿಗೆ ಇನ್ನೂ ಹೆಚ್ಚಿನ ಲಾಭ. ಆದರೆ, ಇದೆಲ್ಲವನ್ನು ಬಿಟ್ಟು ಬಹುದೂರ ಬಂದುಬಿಟ್ಟದ್ದೇವೆಯೇ?

ನಿಜ. ಬಹಳ ಸೀಮಿತವಾದ ದಾರಿಗಳಲ್ಲಿ ಪಯಣಿಸ್ತಿದ್ದೇವೆ ಅಂತ ಅನ್ನಿಸ್ತಿದೆ. ಬಹಳ ಸಂಕುಚಿತವಾದ ದಾರಿಗಳಿಗೆ ಯಾಕೆ ಹೊರಳಿಕೊಂಡಿದ್ದೇವೆ? ಇದು ನನ್ನನ್ನು ಕಾಡುವ ಪ್ರಶ್ನೆ ಮಾತ್ರ ಅಲ್ಲ, ಸಂಕಟಕ್ಕೆ ಕೂಡ ಒಳಗು ಮಾಡ್ತದೆ. ಕೆಲ ವರ್ಷಗಳ ಹಿಂದೆ ಒಬ್ಬ ವಿಮರ್ಶಕರು ಹೇಳ್ತಾ ಇದ್ರು. ಅವರ ಹೆಸರು ಇಲ್ಲಿ ಬೇಡ. ಅವರು ಹೇಳಿದ್ದೇನೆಂದರೆ, 'ನಾನು ಕುವೆಂಪು ಅವರನ್ನು ಎಷ್ಟು ಬೇಕಾದರೂ ಓದಬಲ್ಲೆ, ಎಷ್ಟು ಬಾರಿ ಆದ್ರೂ ಓದಬಲ್ಲೆ. ಆದರೆ, ಈ ಬೇಂದ್ರೆಯನ್ನು ಮಾತ್ರ ಓದುವುದಿಲ್ಲ. ಈ ಬ್ರಾಹ್ಮಣ ಕವಿಯನ್ನು ಓದುವ ಅಗತ್ಯ ನನಗಿಲ್ಲ. ನನಗೆ ಬೇಕಾಗಿದ್ದುದನ್ನು ಕುವೆಂಪು ಈಗಾಗಲೇ ನನಗೆ ಕೊಟ್ಟಿದ್ದಾರೆ. ಆ ಬೇಂದ್ರೆಯವರಿಂದ ನಾನು ಪಡೆದುಕೊಳ್ಳಬೇಕಾಗಿದ್ದು ಏನೂ ಇಲ್ಲ'. ಐ ವಾಸ್ ಶಾಕ್ಡ್. ಇಂಥ ಅಭಿಪ್ರಾಯಗಳು ನಮ್ಮ ವಿಮರ್ಶಾ ಸಂಸ್ಕೃತಿಯಲ್ಲಿ ಯಾಕೆ ಹುಟ್ಟಿಕೊಳ್ತಿವೆ? ಶಂಬಾ ಅವರ ಬಗ್ಗೆ ಅನೇಕ ವರ್ಷಗಳ ಹಿಂದೆ ಮಾತಾಡಲಿಕ್ಕೆ ನಾನು ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಹೋಗಿದ್ದೆ. ಅಲ್ಲಿ ನಾನು ಹೇಳಿದ್ದು ಶಂಬಾ ಹೇಗೆ ತಮ್ಮ ಸಂಶೋಧನೆಯ ಮೂಲಕ ಕನ್ನಡದಲ್ಲಿ ಮೊಟ್ಟಮೊದಲಿಗೆ ಪುರೋಹಿತಶಾಹಿಯ ತಿಳಿವಳಿಕೆಯನ್ನು ಒಡೆದುಹಾಕಲಿಕ್ಕೆ ಪ್ರಯತ್ನಿಸಿದ್ರು ಅಂತ. ಭಗವಂತನಿಂದ ಹಿಡಿದು ಅನೇಕ ಆಚರಣೆಗಳಲ್ಲಿರುವ ಗೂಢವಾದ ಪುರೋಹಿತ ತತ್ತ್ವಗಳನ್ನು ತಮ್ಮ ಅಪಾರ ವಿದ್ವತ್ತಿನ ಮೂಲಕ ಕಾಣಿಸಿದ್ರು. ಬಹಳ ಧೀಮಂತ ಚಿಂತಕ ಅವರು. ಅಲ್ಲಿನ ಒಬ್ಬ ವಿದ್ವಾಂಸರು ಹೇಳಿದರು, 'ಶಂಬಾ ಏನ್ ಸಾರ್, ಅವರು ಬ್ರಾಹ್ಮಣ. ವೇದಗಳನ್ನು ಹಾಗೆ ಹೊಗಳುವ ವ್ಯಕ್ತಿಯಿಂದ ನಾವು ಏನನ್ನ ಕಲೀಬೇಕಾಗಿದೆ?' ಅಂತ ಚೀರಾಡಿದ್ರು. ಆಮೇಲೆ ಅವರು ಬದಲಾದ್ರು. ಶಂಬಾ ಕುರಿತು ಬರವಣಿಗೆಯನ್ನೂ ಮಾಡಿದ್ರು. ಆ ಮಾತು ಬೇರೆ. ನಾನು ಹೇಳಿದ್ದೇನಂದ್ರೆ, ಶಂಬಾ